ಯುವಜನ ಸಬಲೀಕರಣ ಯೋಜನೆಯ ಅನುಷ್ಠಾನ.

10(60) ಶ್ರೀ ಬಾಲಕೃಷ್ಣ ಸಿ.ಎನ್.(ಶ್ರವಣಬೆಳಗೊಳ) . ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಯುವ ಸಬಲೀಕರಣ ಮತ್ತು ಕ್ರೀಡಾ ಯೋಜನೆಗಳು ಹಾಗೂ ಅವುಗಳ ಅನುಷ್ಠಾನದ ವಿವರಗಳೇನು.

ಆ) 2013–14ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರ ನಿಗದಿಗೊಳಿಸಿರುವ ಜಿಲ್ಲಾವಾರು ಅನುದಾನದ ವಿವರಗಳೇನು.

ಇ) ಆರ್ಥಿಕ ವರ್ಷದಲ್ಲಿ ರಾಜ್ಯದಲ್ಲಿ ಒಟ್ಟು ಎಷ್ಟು ಗ್ರಾಮೀಣ ಆಟದ ಮೈದಾನಗಳನ್ನು ನಿರ್ಮಿಸುವ ಗುರಿಯನ್ನು ಸರ್ಕಾರ ಹೊಂದಿದೆ

ಈ) ಹಾಸನ ಜಿಲ್ಲೆಯಲ್ಲಿನ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಎಷ್ಟು ಆಟದ ಮೈದಾನವನ್ನು ಕ್ರೀಡಾಂಗಣಗಳನ್ನು ನಿರ್ಮಿಸಲಾಗುವುದು? (ಆ ಕುರಿತಾದ ತಾಲ್ಲೂಕುವಾರು ವಿವರಗಳೇನು).

ಶ್ರೀ ಅಭಯ ಚಂದ್ರ ಕೆ (ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು)

ಅ) ಅನುಬಂಧ "ಅ" ಲಗತ್ತಿಸಿದೆ.

ಆ) ಅನುಬಂಧ "ಆ" ಲಗತ್ತಿಸಿದೆ.

ಇ) 2013–14ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿ ಪಂಚಾಯತ್ ಯುವ ಕ್ರೀಡಾ ಜೌರ್ ಖೇಲ್ ಅಭಿಯಾನ (ಪೈಕಾ) ಯೋಜನೆಯಡಿ 565 ಗ್ರಾಮಗಳಲ್ಲಿ ಹಾಗೂ 18 ಬ್ಲಾಕ್ ಮಟ್ಟದ ಪಂಚಾಯತ್ ಗಳಲ್ಲಿ ಪೈಕಾ ಕೇಂದ್ರಗಳಲ್ಲಿ ಆಟದ ಮೈದಾನಗಳನ್ನು ಅಭಿವೃದ್ಧಿಪಡಿಸಲು ಆಯ್ಕೆ ಮಾಡಲಾಗಿದೆ.

ಈ) ಹಾಸನ ಜಿಲ್ಲೆಯಲ್ಲಿ ಪೈಕಾ ಯೋಜನೆಯಡಿ ಗ್ರಾಮೀಣ ಪ್ರದೇಶಗಳಲ್ಲಿ 24 ಆಟದ ಮೈದಾನಗಳನ್ನು ಅಭಿವೃದ್ಧಿಪಡಿಸಲು ಆಯ್ಕೆ ಮಾಡಲಾಗಿದೆ. ತಾಲ್ಲೂಕು ವಿವರಗಳು ಈ ಕೆಳಗಿನಂತಿವೆ

ತಾಲ್ಲೂಕು	ಅಭಿವೃದ್ಧಿಸಲಾಗುವ ಆಟದ ಮೈದಾನಗಳ ಸಂಖ್ಯೆ
ಹಾಸನ	4
ಸಕಲೇಶಪುರ	3
ಆಲೂರು	2
ಚೆನ್ನರಾಯಪಟ್ಟಣ	5
ಬೇಲೂರು	3
ಅರಸೀಕೆರೆ	4
ಅರಕಲಗೂಡು	1
ಹೊಳೆನರಸೀಪುರ	2

ಹಾಸನ ಜಿಲ್ಲೆಯಲ್ಲಿ ಕೆಳಕಾಣಿಸಿದ ಕ್ರೀಡಾಂಗಣಗಳಿವೆ.

1. ಹಾಸನ ಜಿಲ್ಲಾ ಕ್ರೀಡಾಂಗಣ, ಒಳಾಂಗಣ ಕ್ರೀಡಾಂಗಣ ಮತ್ತು ಈಜುಕೊಳ, ಹಾಸನ
2 ಅರಕಲಗೂಡು ತಾಲ್ಲೂಕು ಕ್ರೀಡಾಂಗಣ
3 ಆಲೂರು ತಾಲ್ಲೂಕು ಕ್ರೀಡಾಂಗಣ
4 ಸಕಲೇಶಪುರ ತಾಲ್ಲೂಕು ಕ್ರೀಡಾಂಗಣ
5. ಅರಸೀಕೆರೆ ತಾಲ್ಲೂಕು ಕ್ರೀಡಾಂಗಣ

6. ಹೊಳೆನರಸೀಪುರ ತಾಲ್ಲೂಕು ಕ್ರೀಡಾಂಗಣ
7. ಚೆನ್ನರಾಯಪಟ್ಟಣ ತಾಲ್ಲೂಕು ಕ್ರೀಡಾಂಗಣ
8. ಬೇಲೂರು ತಾಲ್ಲೂಕು ಕ್ರೀಂಡಾಂಗಣ

ಅನುಬಂಧ – "ಅ"

ಯುವ ಸಬಲೀಕರಣ ಮತ್ತು ಕ್ರೀಡಾ ನಿರ್ದೇಶನಾಲಯ

2013–14ನೇ ಸಾಲಿನ ಯೋಜನೆ ಮತ್ತು ಅನುಷ್ಠಾನದ ವಿವರ

ಕ್ರ.ಸಂ	ಯೋಜನೆಯ ಹೆಸರು ಮತ್ತು ಲೆಕ್ಕ ಶೀರ್ಷಿಕೆ	2013–14ನೇ ಸಾಲಿನ ಮಂಜೂರಾದ ಮುಂದುವರಿದ ಯೋಜನಾ ಕಾರ್ಯಕ್ರಮಗಳ ವಿವರ
1	2204–00–102–2–03 ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಭಾಗವಹಿಸಿದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಅ) 059 ಇತರೆ ಖರ್ಚು	ಉದ್ದೇಶ ಸ್ವಾಮಿ ವಿವೇಕಾನಂದರ ಜನ್ಮದಿನೋತ್ಸವ ಅಂಗವಾಗಿ ಕೇಂದ್ರ ಸರ್ಕಾರವು ಪ್ರತಿ ವರ್ಷ ಜನವರಿ ಮಾಹೆಯಲ್ಲಿ ಯುವ ಜನೋತ್ಸವವನ್ನು ಆಚರಿಸುತ್ತದೆ ಈ ಕಾರ್ಯಕ್ರಮದಲ್ಲಿ ದೇಶದ ಎಲ್ಲಾ ರಾಜ್ಯಗಳ 15 ರಿಂದ 35 ವರ್ಷದೊಳಗಿನ ಪ್ರತಿಭಾನ್ವಿತ ಯುವಜನರು 18 ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಾರೆ ಈ ರಾಷ್ಟ್ರ ಮಟ್ಟದ ಯುವಜನೋತ್ಸವದಲ್ಲಿ ಭಾಗವಹಿಸಲು ಕರ್ನಾಟಕ ರಾಜ್ಯದಿಂದ ಯುವ ತಂಡವನ್ನು ಜಿಲ್ಲಾ ಮಟ್ಟ ಹಾಗೂ ರಾಜ್ಯ ಮಟ್ಟದ ಯುವ ಜನೋತ್ಸವಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಿ ಆಯ್ಕೆ ಮಾಡಿ ನಿಯೋಜಿಸಲಾಗುವುದು ಅ.ಜಿಲ್ಲಾ ಮಟ್ಟ.

		ಶಾಮಿಯಾನ, ಕುರ್ಚಿಗಳು, ಟೇಬಲ್, ಸೌಂಡ್ ಸಿಸ್ಟಂ, ಮೈಕ್, ವೇದಿಕೆ ಅಲಂಕಾರ, ಪ್ರಮಾಣಪತ್ರ, ಮೊಮೆಂಟೋ, ಬ್ಲಾಡ್ಜ್, ಬ್ಯಾನರ್, ಆಹ್ವಾನ ಪತ್ರಿಕೆ ಇತ್ಯಾದಿಗಳಿಗಾಗಿ, ಊಟೋಪಹಾರ ವೆಚ್ಚಕ್ಕಾಗಿ, ತೀರ್ಪುಗಾರರಿಗೆ ಗೌರವಧನ, ನಗದು ಬಹುಮಾನ, ಸಮವಸ್ತ್ರ, ಸಾಂಸ್ಕೃತಿಕ ಸಲಕರಣೆ, ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆ ಮತ್ತು ವಿಜೇತರಾದ ಸ್ಪರ್ಧಿಗಳಿಗೆ ರಾಜ್ಯ ಮಟ್ಟಕ್ಕೆ ಸ್ಪರ್ಧಿಸಲು ತರಬೇತಿ ಇತರೆ ವೆಚ್ಚಕ್ಕಾಗಿ ಒಂದು ಜಿಲ್ಲೆಗೆ 50,000/–ದಂತೆ 30 ಜಿಲ್ಲೆಗಳಿಗೆ. **ಆ.ರಾಜ್ಯ ಮಟ್ಟ:** ಶಾಮಿಯಾನ, ಕುರ್ಚಿಗಳು, ಟೇಬಲ್, ಸೌಂಡ್ ಸಿಸ್ಟಂ, ಮೈಕ್, ವೇದಿಕೆ ಅಲಂಕಾರ, ಪ್ರಮಾಣ ಪತ್ರ, ಮೊಮೆಂಟೋ, ಬ್ಲಾಡ್ಜ್, ಬ್ಯಾನರ್, ಆಹ್ವಾನ ಪತ್ರಿಕೆ, ಫೋಟೋ, ಅತಿಥಿಗಳಿಗೆ ಊಟೋಪಹಾರ, ಕಾರ್ಯಕ್ರಮದಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ವೆಚ್ಚ, ವಿಜೇತರಿಗೆ ನಗದು ಬಹುಮಾನ, ಸಮವಸ್ತ್ರ, ಸಾಂಸ್ಕೃತಿಕ ಸಲಕರಣೆ, ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆ. ತೀರ್ಪುಗಾರರ ಪ್ರಯಾಣ, ವಸತಿ ಹಾಗೂ ಗೌರವಧನದ ವೆಚ್ಚ, ಇತರೆ ವ್ಯವಸ್ಥೆಗಾಗಿ (ವಾಹನ, ಪೆಟ್ರೋಲ್, ಅಂಚೆ, ವೈದ್ಯಕೀಯ ಇತ್ಯಾದಿ) ಇ ರಾಷ್ಟ್ರ ಮಟ್ಟದ ಯುವಜನೋತ್ಸವ: ಯುವಜನೋತ್ಸವ ಸಂಘಟಿಸುವ

		ರಾಜ್ಯಕ್ಕೆ ತೆರಳುವ ರಾಜ್ಯತಂಡಕ್ಕೆ ಸಮವಸ್ತ್ರ, ಪ್ರಯಾಣ ವೆಚ್ಚ, ಪ್ರಯಾಣದಲ್ಲಿನ ಊಟೋಪಹಾರ ಮತ್ತು ವಸತಿ ನಿಯೋಜನೆ, ಕಾರ್ಯಕ್ರಮಕ್ಕೆ ಬೇಕಾಗುವ ಲೇಖನ ಸಾಮಗ್ರಿಗಳು ಇತ್ಯಾದಿಗಳಿಗಾಗಿ.
2	2204-00-102-2-03-117 ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ	1 ವಿದ್ಯಾರ್ಥಿ ವೇತನ, ಮತ್ತು ಪ್ರೋತ್ಸಾಹ ಮಾಧ್ಯಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದಲ್ಲಿ ಭಾಗವಹಿಸಿ ಪದಕ ಪಡೆದ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿದ 834 ಶಾಲಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸುವ ಸಲುವಾಗಿ ಪ್ರತಿ ವಿದ್ಯಾರ್ಥಿಗೆ ರೂ 3000/- ರಂತೆ ನೀಡಲಾಗುವುದು
	2204-00-102-2-03-117 ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಸಾಧನೆ ಮಾಡುವ ಎಲ್ಲಾ ಕ್ರೀಡಾ ಪುಟಗಳು ಶೈಕ್ಷಣಿಕ ಶುಲ್ಕವನ್ನು ಸರ್ಕಾರದಿಂದಲೇ ಭರಿಸಲಾಗುವುದು. **(ಹೊಸ ಯೋಜನೆ)**	2) ಆ. ಕರ್ನಾಟಕದ ಕ್ರೀಡಾಪಟುಗಳು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಸಾಧನೆ ಮಾಡಿ ಪ್ರಶಸ್ತಿಗಳನ್ನು ಗಳಿಸಿರುವ 1000 ಕ್ರೀಡಾಪಟುಗಳ ಶಾಲಾ-ಕಾಲೇಜು ವಿದ್ಯಾರ್ಥಿಗಳ ಶೈಕ್ಷಣಿಕ ಶುಲ್ಕವನ್ನು ಸರ್ಕಾರದ ವತಿಯಿಂದ ಮರುಪಾವತಿ ಮಾಡಲು ಕ್ರಮ ಕೈಗೊಳ್ಳಲಾಗುವುದು ಹಾಗೂ ಇನ್ನಿತರೇ ಅಗತ್ಯ ಸಾಧನೆಗಳಿಗೆ ವೆಚ್ಚ ಭರಿಸಲಾಗುವುದು. ಈ ಹೊಸ ಯೋಜನೆಯ ಸಂಬಂಧ ಕ್ರಿಯಾ ಯೋಜನೆಯನ್ನು ಹಾಗೂ ಮಾರ್ಗಸೂಚಿಗಳನ್ನು ತಯಾರಿಸಲಾಗಿದ್ದು ಸರ್ಕಾರದ ಅನುಮೋದನೆ ಪಡೆದು

		ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.
2	2204-00-103-0-02 ರಾಜ್ಯ ಯುವ ಕೇಂದ್ರ 059 ಇತರೆ ಖರ್ಚು	ರಾಜ್ಯ ಯುವ ಕೇಂದ್ರದ ಪ್ರಾಂಗಣದಲ್ಲಿ ಗ್ರಿಲ್/ಗೇಟ್ ವರ್ಕ್ ಮಾಡಿಸುವುದು, ಸಭಾಂಗಣದ ಗ್ರೀನ್ ರೂಮ್ ನವೀಕರಣ, ವುಡನ್ ಪ್ಯಾನಲಿಂಗ್ ಭಾಗಶಃ ಕಾಮಗಾರಿ ವೆಚ್ಚ, ಸಭಾಂಗಣದ ಸುತ್ತ ಫ್ಲಾಗಿಂಗ್, ಲ್ಯಾಂಡ್‌ಸ್ಕೇಪಿಂಗ್ ಮತ್ತು ಕಾರ್‌ಪಾರ್ಕಿಂಗ್ ವಿತ್ ರ‍್ಯಾಂಪ್ ಕಾಮಗಾರಿ, ಕೊಳವೆ ಬಾವಿ ತೊಡಿಸುವ ಕಾಮಗಾರಿ, ಸೋಲಾರ್ ಲೈಂಟಿಂಗ್ ವ್ಯವಸ್ಥೆ, ಕಟ್ಟಡದ ಮೇಲ್ಛಾಗದಲ್ಲಿ ನಾಮಫಲಕ, ಕಛೇರಿ ಮುಂಭಾಗದಲ್ಲಿ ನಾಮಫಲಕಕ್ಕೆ ಲೈಟಿಂಗ್ ವ್ಯವಸ್ಥೆ, ಯವನಿಕಾ ರಂಗಮಂದಿರಕ್ಕೆ ಧ್ವನಿವರ್ಧಕ, ವ್ಯವಸ್ಥೆ, ಯವನಿಕಾ ರಂಗಮಂದಿರ ಮತ್ತು ಸಮ್ಮೇಳನಾ ಸಭಾಂಗಣಕ್ಕೆ ಎ/ಸಿ ಅಳವಡಿಸುವಿಕೆ, ಮಳೆ ಕೊಯ್ಲು ಪದ್ಧತಿ ವ್ಯವಸ್ಥೆ, ಯವನಿಕಾ ರಂಗಮಂದಿರದ ಆಸನಗಳ ಬದಲಾವಣೆ ಮತ್ತು ನವೀಕರಣ, ರಾಜ್ಯ ಯುವ ಕೇಂದ್ರ ಕಟ್ಟಡಕ್ಕೆ ಅಗ್ನಿಶಾಮಕ ಉಪಕರಣ, ಮೆಟಲ್ ಡಿಟೆಕ್ಟರ್ ಉರಕರಣಗಳನ್ನು ಅಳವಡಿಕೆ, ಕಛೇರಿಯಲ್ಲಿರುವ ಕೊರಡಿಗಳ ಕಿಟಕಿಗಳಿಗೆ ಪರದೆಗಳನ್ನು ಅಳವಡಿಕೆ, ಪೀರೋಪಕರಣ ಖರೀದಿ, ಜೆರಾಕ್ಸ್ ಯಂತ್ರ, ಕಂಪ್ಯೂಟರ್ ಪ್ರಿಂಟರ್, ಯುಪಿಎಸ್ ಉಪಕರಣ ಖರೀದಿ ಮತ್ತು ಗೃಹರಕ್ಷಕ ದಳ ಹಾಗೂ ಸ್ವಚ್ಛತಾ

		ಸಿಬ್ಬಂದಿಯವರ ವೇತನ ಪಾವತಿಗಾಗಿ ವಿನಿಯೋಗಿಸಲಾಗುವುದು.
(1)	2204-00-103-0-18-059 ಅ) ರಾಜ್ಯ ಯುವ ಕೇಂದ್ರದಲ್ಲಿ ಒಳಾಂಗಣ ಚಟುವಟಿಕೆಗಳು ಬಿ) ಜಿಲ್ಲಾ ಯುವ ಪ್ರಶಸ್ತಿ ಮತ್ತು ಯುವಜನ ಸಮ್ಮೇಳನ. ಕಾರ್ಯಗಾರ, ತರಬೇತಿ ಮತ್ತು ಜಿಲ್ಲಾ ಯುವ ಪ್ರಶಸ್ತಿ	ವೀಡಿಯೋಗ್ರಫಿ ತರಬೇತಿ ಶಿಬಿರ, ಛಾಯಾಚಿತ್ರಣ ತರಬೇತಿ ಶಿಬಿರ ಹಾಗೂ ಗ್ರಂಥಾಲಯದ ವಾರಪತ್ರಿಕೆ, ದಿನಪತ್ರಿಕೆ ವೆಚ್ಚ, ಬ್ಯೂಟಿಷಿಯನ್ ತರಬೇತಿ ಶಿಬಿರ (2 ಬ್ಯಾಚ್), ಅಂಗವಿಕಲರಿಗೆ ವಿವಿಧ ಸಾಂಸ್ಕೃತಿಕ ಸ್ಪರ್ದೆಗಳು, ಶಾಸ್ತ್ರೀಯ ನೃತ್ಯ ರೂಪಕ ಮತ್ತು ಜಾನಪದ ನೃತ್ಯರೂಪಕ ಸ್ಪರ್ದೆ, ಯುವಜನರಿಗೆ ಉಲ್ಲಾಪಲ್ಲಾ ಚರ್ಚಾ ಸ್ಪರ್ಧಾ ಕಾರ್ಯಕ್ರಮ, ಚಿತ್ರಕಲಾ ಸ್ಪರ್ಧಾ ಕಾರ್ಯಕ್ರಮ, ಅಭಿನಯ ತರಬೇತಿ ಕಾರ್ಯಕ್ರಮ, ನಿರೂಪಣೆ ಕಾರ್ಯಕ್ರಮ, ಕರಕುಶಲ ತರಬೇತಿ ಮತ್ತು ಕಲಿಕ ತರಬೃತಿ ಶಿಬಿರ ಹಾಗೂ ಗ್ರಂಥಾಲಯದ ವಾರಪತ್ರಿಕೆ, ದಿನಪತ್ರಿಕೆ ಬಿಲ್ಲು ಪಾವತಿಗಾಗಿ ಮತ್ತು ಪುಸ್ತಕ ಖರೀದಿಗಾಗಿ ವಿನಿಯೋಗಿಸಲಾಗುವುದು **ಉದ್ದೇಶ :-** ಯುವಜನರನ್ನು ಹೆಚ್ಚು ಕ್ರೀಯಾಶೀಲರನ್ನಾಗಿಸುವ ದೃಷ್ಟಿಯಿಂದ ಪ್ರತಿ ಜಿಲ್ಲೆಯಲ್ಲಿಯೂ ಯುವಜನ ಸಮ್ಮೇಳನಗಳು, ಕಾರ್ಯಗಾರಗಳು, ಯುವ ತರಬೇತಿ ಶಿಬಿರಗಳನ್ನು ಹಾಗೂ ಜಿಲ್ಲಾ ಯುವ ಪ್ರಶಸ್ತಿಗಳನ್ನು ಜಿಲ್ಲಾ ಮಟ್ಟದಲ್ಲಿ 15 ರಿಂದ 35 ವರ್ಷದೊಳಗಿನ ಪ್ರತಿಭಾನ್ವಿತ ಯುವಜನರಿಗಾಗಿ ಸಮ್ಮೇಳನ, ಕಾರ್ಯಗಾರ, ಹಾಗೂ ತರಬೇತಿ ಶಿಬಿರಗಳನ್ನು ನಡೆಸಲಾಗುವುದು. ಜಿಲ್ಲಾ

		ಮಟ್ಟದ ಕಾರ್ಯಕ್ರಮಕ್ಕೆ ಒಂದು ಜಿಲ್ಲೆಗೆ ತಲಾ ರೂ.1,50,000/–ಗಳನ್ನು ಈ ಕೆಳಕಂಡಂತೆ ವಿಂಗಡಿಸಲಾಗಿದೆ. **I. ಯುವ ಸಮ್ಮೇಳನ:** ಒಂದು ದಿನದ ಯುವ ಸಮ್ಮೇಳನವನ್ನು ಕನಿಷ್ಠ 250 ಮಂದಿ ಯುವಕ/ಯುವತಿಯರಿಗೆ ಸಾಮಾಜಿಕ ಮೌಲ್ಯ ಸಂರಕ್ಷಣೆ, ಗ್ರಾಮ ನೈರ್ಮಲ್ಯ, ಶೈಕ್ಷಣಿಕ ಮೊಂತಾದ ಸಮುದಾಯ ಚಟುವಟಿಕೆ, ಆಹಾರ ಪಡಿತರ ಯೋಜನೆ ಮುಂತಾದ ಸಾಮಾಜಿಕ ಭದ್ರತೆ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ತೋರಬೇಕಾದ ನ್ಯಾಯ ಮುಂತಾದ ಅಂಶಗಳಲ್ಲಿ ಯುವಜನರ ಪಾತ್ರ ಬಗ್ಗೆ ಸಮ್ಮೇಳನವನ್ನು ಏರ್ಪಡಿಸಲಾಗುತ್ತದೆ. ಒಂದು ಜಿಲ್ಲೆಗೆ 55,000/–ದಂತೆ 30 ಜಿಲ್ಲೆಗಳಿಗೆ **II. ಯುವ ಕಾರ್ಯಾಗಾರ:** ಯುವ ಕಾರ್ಯಗಾರವನ್ನು 2 ದಿನಗಳು ಕನಿಷ್ಠ 100 ಮಂದಿ ಯುವಜನರಿಗೆ ರಾಷ್ಟ್ರೀಯ ವಿಪತ್ತು ನಿರ್ವಹಣೆ, ಗ್ರಾಮಸಭೆಯಲ್ಲಿ ಯುವಜನ ಸಂಸ್ಥೆಗಳ ಪಾತ್ರ, ಯುವ ಪ್ರಶಸ್ತಿಗಳ ರೂಪುರೇಷೆಗಳು ಮುಂತಾದ ವಿಷಯಗಳ ಕುರಿತು ಆಯಾ ಕ್ಷೇತ್ರದಲ್ಲಿ ಪರಿಣಿತರಿರುವ ವಿಷಯ ತಜ್ಞರನ್ನು ಆಹ್ವಾನಿಸಿ ಕಾರ್ಯಾಗಾರ ಏರ್ಪಡಿಸಲಾಗುತ್ತದೆ. ಒಂದು ಜಿಲ್ಲೆಗೆ 35,000/–ದಂತೆ 30

	4. 2204–00–103–0–27–059 ಯುವನೀತಿ ಅನುಷ್ಠಾನ	ಜಿಲ್ಲೆಗಳಿಗೆ **III. ಯುವ ತರಬೇತಿ:** ಯುವಜನೋತ್ಸವ/ಯುವಜನ ಮೇಳಗಳಲ್ಲಿ ಏರ್ಪಡಿಸುವ ಸ್ಪರ್ಧೆಗಳ ಬಗ್ಗೆ ಸಂಗೀತ ಶಾಲೆ/ಕಲಾ ತಂಡಗಳೊಂದಿಗೆ ಸಂಪರ್ಕಿಸಿ ಪೂರ್ಣವಧಿ 3 ದಿನಗಳ ತರಬೇತಿ ಶಿಬಿರವನ್ನು ಆಸಕ್ತ ಯುವಕ/ ಯುವತಿಯರಿಗಾಗಿ ಏರ್ಪಡಿಸಲಾಗುತ್ತದೆ **ಒಂದು ಜಿಲ್ಲೆಗೆ 10,000/–ದಂತೆ 30 ಜಿಲ್ಲೆಗಳಿಗೆ** **IV.ಜಿಲ್ಲಾ ಯುವ ಪ್ರಶಸ್ತಿ:** ಕ್ರೀಡೆ, ಸಾಂಸ್ಕೃತಿ ಹಾಗೂ ಸಮುದಾಯ ಅಭಿವೃದ್ಧಿ ಕ್ಷೇತ್ರಗಳಲ್ಲಿ ಉತ್ತಮವಾಗಿ ಕಾರ್ಯಚಟುವಟಿಗಳನ್ನು ನಿರ್ವಹಿಸಿರುವ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಸಮಾಜ ಸೇವೆ ಮಾಡಿರುವ ಯುವಜನರಿಗೆ ಮತ್ತು ಯುವಸಂಘಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಸಲುವಾಗಿ ರಾಜ್ಯ ಯುವ ಪ್ರಶಸ್ತಿಯನ್ನು ನೀಡಿ ಗೌರವಿಸಲು ವೆಚ್ಚ ಭರಿಸಲಾಗುತ್ತದೆ ಜಿಲ್ಲಾ ಯುವ ಪ್ರಶಸ್ತಿ – 5 ವೈಯಕ್ತಿಕ ಪ್ರಶಸ್ತಿ ತಲಾ ರೂ 5,000/–ದಂತೆ 25,000/–, ಜಿಲ್ಲಾ ಯುವ ಪ್ರಶಸ್ತಿ (2 ಸಂಘಗಳಿಗೆ) ಒಂದು ಯುವಕ ಸಂಘ ಮತ್ತು ಒಂದು ಯುವತಿ ಮಂಡಳಿಗೆ ತಲಾ ರೂ.10,000/–ದಂತೆ ರೂ.20.000/– ಹಾಗೂ ಪ್ರಶಸ್ತಿ ವಿಜೇತರಿಗೆ ನೆನಪಿನ

		ಕಾಣಿಕೆ, ಪ್ರಮಾಣ ಪತ್ರ ಮತ್ತು ಜಿಲ್ಲಾ ಯುವ ಪ್ರಶಸ್ತಿ ಸಮಾರಂಭದ ಸಂಘಟನೆಗೆ ರೂ.5,000/–ಗಳು. **ಒಂದು ಜಿಲ್ಲೆಗೆ 50,000/–ದಂತೆ 30 ಜಿಲ್ಲೆಗಳಿಗೆ** ಈ ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳನ್ನು ಸಂಘಟಿಸಲು ಶಾಮಿಯಾನ, ಕುರ್ಚಿಗಳು, ಟೇಬಲ್, ಸೌಂಡ್ ಸಿಸ್ಟಂ, ಮೈಕ್, ವೇದಿಕೆ ಅಲಂಕಾರ, ಪ್ರಮಾಣ ಪತ್ರ, ಮೊಮೆಂಟೋ, ಬಾಡ್ಜ್, ಬ್ಯಾನರ್, ಆಹ್ವಾನ ಪತ್ರಿಕೆ, ಫೋಟೋ, ಫಲಾನುಭವಿಗಳ (ಶಿಬಿರಾರ್ಥಿಗಳ) ಪ್ರಯಾಣ ಭತ್ಯೆ ಹಾಗೂ ಊಟೋಪಹಾರ, ಶಿಬಿರಾರ್ಥಿಗಳ ತರಬೇತಿ ಸಾಮಗ್ರಿಗಳ ವೆಚ್ಚ, ಸಂಪನ್ಮೂಲ ವ್ಯಕ್ತಿ ಮತ್ತು ಸಂಯೋಜಕರ ಪ್ರಯಾಣ, ವಸತಿ ಹಾಗೂ ಗೌರವಧನ ಮತ್ತು ಇತರೆ ವೆಚ್ಚಕ್ಕಾಗಿ ಒಟ್ಟಾರೆ ಒಂದು ಜಿಲ್ಲೆಗೆ 1,50,000/–ದಂತೆ 30 ಜಿಲ್ಲೆಗಳಲ್ಲಿ ರೂ.45,00,000/–ಗಳು. **ಆ.ರಾಜ್ಯ ಮಟ್ಟ:** ರಾಜ್ಯದ್ಯಂತ ಯುವಜನರನ್ನು ಆಹ್ವಾನಿಸಿ ಜಿಲ್ಲಾ ಮಟ್ಟದಲ್ಲಿ ನಡೆಸಿದ ಸಮಾವೇಶ, ಕಾರ್ಯಗಾರ, ತರಬೇತಿಗಳ ಕುರಿತು ಒಂದು ದಿನದ ವಿಚಾರ ಸಂಕಿರಣ ಹಾಗೂ ಉನ್ನತ ಮಟ್ಟದ ಸಮಾವೇಶ ನಡೆಸಿ, ಶಿಬಿರಾರ್ಥಿಗಳಿಗೆ 3 ದಿನದ ರಾಷ್ಟ್ರೀಯ ವಿಪತ್ತು ಹಾಗೂ ಸಾಮಾಜಿಕ ಕಳಕಳಿ ವಿಚಾರಗಳ ಬಗ್ಗೆ ತರಬೇತಿಯನ್ನು

		ಏರ್ಪಡಿಸಲಾಗುವುದು ಈ ರಾಜ್ಯ ಮಟ್ಟದ ಕಾರ್ಯಕ್ರಮ ಸಂಘಟನೆಗಾಗಿ ಶಾಮಿಯಾನ, ಕುರ್ಚಿಗಳು, ಟೇಬಲ್, ಸೌಂಡ್‌ಸಿಸ್ಟಂ, ಮೈಕ್, ವೇದಿಕೆ ಅಲಂಕಾರ, ಪ್ರಮಾಣ ಪತ್ರ, ಮೊಮೆಂಟೋ, ಬಾಡ್ಜ್, ಬ್ಯಾನರ್, ಆಹ್ವಾನ ಪತ್ರಿಕೆ, ಫೋಟೋ, ಫಲಾನಿಭವಿಗಳ (ಶಿಬಿರಾರ್ಥಿಗಳ) ಪ್ರಯಾಣ ಭತ್ಯೆ ಹಾಗೂ ಊಟೋಪಹಾರ, ಕಾರ್ಯಕ್ರಮದಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ವೆಚ್ಚ, ಸಂಪನ್ಮೂಲ ವ್ಯಕ್ತಿ ಮತ್ತು ಸಂಯೋಜಕರ ಪ್ರಯಾಣ, ವಸತಿ ಹಾಗೂ ಗೌರವಧನದ ವೆಚ್ಚ, ಶಿಬಿರಾರ್ಥಿಗಳ ತರಬೇತಿ ಸಾಮಗ್ರಿಗಳ ವೆಚ್ಚ, ಸಾರಿಗೆ ವ್ಯವಸ್ಥೆ ಮುಂತಾದ ಇತರೆ ವ್ಯವಸ್ಥೆಗಾಗಿ (ವಾಹನ, ಪೆಟ್ರೋಲ್, ಅಂಚೆ, ವೈದ್ಯಕೀಯ ಇತ್ಯಾದಿ) ವೆಚ್ಚ ಭರಿಸಲಾಗುವುದು. **ಎ) 1. ಜಿಲ್ಲಾ ಯುವ ಸಬಲೀಕರಣ ಕೇಂದ್ರಗಳ ಸ್ಥಾಪನೆ:** ಕಟ್ಟಡದ ನೀಲ–ನಕ್ಷೆ, ತರಬೇತಿ ಕೋಣೆಗಳು, ಆಪ್ತ ಸಮಾಲೋಚನಾ ಕೋಣೆಗಳು, ಮಾಹಿತಿ ವಿನಿಮಯ ಕೋಣೆಗಳು, ಗಣಕಯಂತ್ರ ಕೋಣೆ, ಅಭ್ಯಾಸ ಕೋಣೆಗಳು, ಮನರಂಜನಾ ಮತ್ತು ಆಟದ ಕೋಣೆಗಳು, ಆಡಳಿತ ಕಛೇರಿ, ಮಿನಿ ಸಭಾಂಗಣ, ಫುಡ್ ಕೋರ್ಟ್, (ಮಳೆ ನೀರು ಕೋಯ್ಲು, ಸೌರ ಶಕ್ತಿಯ ಬಳಕೆಯನ್ನು ಪ್ರಾಯೋಗಿಕವಾಗಿ

		ಬಿಂಬಿಸುವ ನಕ್ಷೆ) – ಅಂತರ–ರಾಷ್ಟ್ರೀಯ ಗುಣಮಟ್ಟದ ಯುವ ಸಬಲೀಕರಣ ಕೇಂದ್ರಗಳ ಸ್ಥಾಪನೆಗಾಗಿ : ಅಗತ್ಯ ಉಪಕರಣಗಳು ಮತ್ತು ಸಾಮಗ್ರಿಗಳ ಪೂರೈಕೆಗಾಗಿ ಪ್ರತಿ ಜಿಲ್ಲೆಗೆ ರೂ. 2.00 ಲಕ್ಷಗಳಂತೆ 10 ಜಿಲ್ಲೆಗಳಿಗೆ . ಯುವಜನರ ಬಹುಮುಖಿ ಬೌದ್ಧಿಕ ಸಾಮರ್ಥ್ಯವನ್ನು ವೃದ್ಧಿಸಲು ವಿಶಾಲ ತಳಹದಿಯ ಮನರಂಜನಾ ಚಟುವಟಿಕೆಗಳು, ತರಬೇತಿ ಹಾಗೂ ಸ್ಪರ್ಧೆಗಳು . ಓದುವ ಶಿಬಿರಗಳು: ಸಂಗೀತ ಹಾಗೂ ನೃತ್ಯ ತರಗತಿಗಳು, ಯೋಗ ತರಗತಿಗಳು, ಮನೋವೈಜ್ಞಾನಿಕ ಸಲಹೆ ಹಾಗೂ ಉದ್ಯೋಗಾವಕಾಶಕ್ಕಾಗಿ ಯುವ ಸಲಹಾ ಚಟುವಟಿಕೆಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಗ್ರಾಮೀಣ ಯುವಜನರಿಗಾಗಿ ಪ್ರಾಥಮಿಕ ಕಂಪ್ಯೂಟರ್ ತರಬೇತಿ · ಕ್ರೀಡಾ ಚಟುವಟಿಕೆಗಳು ಹಾಗೂ ರ್ಯಾಂಪ್ಲಿಂಗ್ ಮತ್ತು ಚಾರಣ ಮುಂತಾದ ಸಾಹಸ ಕ್ರೀಡೆಗಳ ಆಯೋಜನೆ ಮತ್ತು ಅಗತ್ಯ ಮಾನವ ಸಂಪನ್ಮೂಲಕ್ಕಾಗಿ. **5. ಜೀವನ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮ** ಜೀವನ ಕೌಶಲ್ಯ ಅಭಿವೃದ್ಧಿಗಾಗಿ ತರಬೇತಿ ಕಾರ್ಯ ಕ್ರಮಗಳನ್ನು ಜಿಲ್ಲೆಗಳಲ್ಲಿ ಆಯೋಜಿಸುವುದು. ಪ್ರತಿ ತಾಲೂಕಿನಿಂದ 50 ಯುವಜನರಿಗೆ (ಪ್ರತಿ ಯುವಕ/ ಯುವತಿಗೆ ಪ್ರತಿ ದಿನಕ್ಕೆ ರೂ.220 ರಂತೆ 10 ದಿನದ ತರಬೇತಿ, ಜೀವನ ಕೌಶಲ್ಯ